# ಸೂಚನಾ ಪತ್ರ

## ವಿಷಯ: ತನೇ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ದಾಖಲೆಗಳ ಪರಿಶೀಲನೆಗೆ ಹಾಜರಾಗುವ ಕುರಿತು

ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಬೆಂಗಳೂರು ರವರ ದಿನಾಂಕ 21-12-2019ರ ಅಧಿಸೂಚನೆಯಲ್ಲಿ ಭೂಮಾಪನ ಪರವಾನಗಿ ವಿತರಿಸುವ ಸಂಬಂಧ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದಂತೆ ದಿ:01-02-2021 ಮತ್ತು ದಿ:02-02-2021 ರಂದು ನಡೆಸಲಾದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪಡೆದ ಅಂಕಗಳನ್ನಾಧರಿಸಿ 1 ಮತ್ತು 2ನೇ ಅಭ್ಯರ್ಥಿಗಳ ಪಟ್ಟಿಯನ್ನು ದಿ:16-2-2021, ದಿ:1-4-2021, ಮತ್ತು ದಿ:13-9-2021 ರಲ್ಲಿ ಪ್ರಚುರಪಡಿಸಿ ದಾಖಲೆಗಳ ಪರಿಶೀಲನೆಗೆ ಹಾಜರಾಗಲು ಸೂಚನೆ ನೀಡಲಾಗಿತ್ತು. ಅದರಂತೆ 1483 ಅಭ್ಯರ್ಥಿಗಳು ಹಾಜರಾಗಿ ತರಬೇತಿ ಪಡೆದಿರುತ್ತಾರೆ. ದಿ:21-12-2019 ರ ಸೂಚನೆಯಂತೆ 2072 ರ ಪೈಕಿ 830 ಅಭ್ಯರ್ಥಿಗಳು ಅರ್ಹರಾಗಿರುತ್ತಾರೆ. 736 ಅಭ್ಯರ್ಥಿಗಳು ತರಬೇತಿ ಪಡೆಯಲು ಅರ್ಹರಿದ್ದು,ಉಳಿದಂತಹ 506 ಪರವಾನಗಿ ಭೂಮಾಪಕರ ಹುದ್ದೆಯಲ್ಲಿ ಭರ್ತಿಮಾಡುವ ನಿಟ್ಟಿನಲ್ಲಿ, ಕನಿಷ್ಠ ಉತ್ತೀರ್ಣ ಅಂಕಗಳನ್ನು 35% ಗೆ ನಿಗಧಿಪಡಿಸಿ, ತನೇ ಪಟ್ಟಿಯನ್ನು ತಯಾರಿಸಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳು ದಾಖಲೆಗಳ ಪರಿಶೀಲನೆಗೆ ದಿ:11/10/21 ಮತ್ತು ದಿ:12/10/2021 ರಂದು ಅನುಬಂಧ 1 ಮತ್ತು 2 ಲ್ಲಿ ನೀಡಿದ ಅಭ್ಯರ್ಥಿಗಳ ಪಟ್ಟಿಯಂತೆ ನಿಗಧಿತ ಸಮಯದಲ್ಲಿ ಕೇಂದ್ರ ಕಛೇರಿಗೆ ಹಾಜರಾಗಲು ಸೂಚಿಸಿದೆ. ದಿ:20-12-2019 ರ ಅಧಿಸೂಚನೆಯಲ್ಲಿ ನೀಡಿದಂತೆ ಅವಶ್ಯದಾಖಲೆಗಳೊಂದಿಗೆ ದಾಖಲೆಗಳ ಪರಿಶೀಲನೆಗೆ ಹಾಜರಾಗಲು ಸೂಚಿಸಿದೆ. ಅನುಬಂಧ 1 ರಲ್ಲಿ 971 ಅಭ್ಯರ್ಥಿಗಳ ಪಟ್ಟಿ ಲಗತ್ತಿಸಿದ್ದು ಇಲಾಖೆಗೆ 506 ಅಭ್ಯರ್ಥಿಗಳು ಅವಶ್ಯವಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಾದಲ್ಲಿ ಅಭ್ಯರ್ಥಿಗಳ ಪಟ್ಟಿಯನ್ನು ಖಾಯ್ದಿರಿಸಿ ಸರ್ಕಾರದಿಂದ ಅನುಮೋದನೆ ಪಡೆದು ನಂತರ ತರಬೇತಿ ನಿಯೋಜಿಸಿ ಮುಂದಿನ ಕ್ರಮ ವಹಿಸಲಾಗುವುದು.

ಆಯುಕ್ತರು
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ
ಬೆಂಗಳೂರು